09	ಚಾಮರಾಜನಗರ	468.66	99.91
10	ಮಂಡ್ಯ	730.51	154.18
11	ಚಿಕ್ಕಮಗಳೂರು	744.46	181.18
12	ಹಾಸನ	935.28	223.49
13	ಕೊಡಗು	277.08	57.60
14	ದಕ್ಷಿಣ ಕನ್ನಡ	0.00	0.00
15	ಉಡುಪಿ	0.00	0.00
16	ಗುಲ್ಬರ್ಗಾ	1142.29	478.11
17	ಬೀದರ್	468.94	203.23
18	ರಾಯಚೂರು	505.23	214.56
19	ಕೊಪ್ಪಳ	540.21	131.91
20	ಬಳ್ಳಾರಿ	890.73	307.18
21	ಬೆಳಗಾಂ	1292.09	380.44
22	ಬಿಜಾಪುರ	588.79	218.22
23	ಬಾಗಲಕೋಟೆ	741.47	241.86
24	ಧಾರವಾಡ	622.58	204.89
25	ಗದಗ್	712.43	188.07
26	ಹಾವೇರಿ	884.03	359.51
27	ಉತ್ತರ ಕನ್ನಡ	544.81	98.22
	ಒಟ್ಟು	**18512.50**	**5210.89**

3726 (4336) : ಶ್ರೀ ಕಿರಣ್ ಕುಮಾರ್ ಕೆ.ಎಸ್. (ಕಳ್ಳಂಬೆಳ್ಳ)

ಶ್ರೀ ಆರ್ ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೆಂಗಳೂರು ಉತ್ತರ ವಲಯ-3ರ ವ್ಯಾಪ್ತಿಯಲ್ಲಿರುವ ಕೃಷ್ಣಯ್ಯಪಾಳ್ಯದ ಇಂಡಿಯನ್ ಪಬ್ಲಿಕ್ ಶಾಲೆಯು ಸರ್ಕಾರಿ ಶಾಲೆಗೆ ತೀರ ಸಮೀಪದಲ್ಲಿರುವುದು ನಿಜವಲ್ಲವೇ;

ಆ. ಹಾಗಿದ್ದರೆ, ಈ ಶಾಲೆಯನ್ನು ಸರ್ಕಾರದ ನಿಯಮಗಳ ಪ್ರಕಾರ ಮುಚ್ಚದಿರಲು ಕಾರಣವೇನು;

ಇ. ಈ ಶಾಲೆಯ ವಿರುದ್ಧ ದೂರುಗಳು ಇರುವುದು ನಿಜವಲ್ಲವೇ; ಹಾಗಿದ್ದರೆ ಶಾಲೆಯ ವಿರುದ್ಧ ಕೈಗೊಂಡ ಕ್ರಮವೇನು;

ಈ. ಈ ಶಾಲೆಯೂ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದೇ ಹೊಂದಿಲ್ಲದಿದ್ದರೆ ಕೈಗೊಳ್ಳುವ ಕ್ರಮವೇನು;

ಉ. ಶಾಲೆಯ ಆಡಳಿತ ಮಂಡಳಿಯು ಸರ್ಕಾರದ ನಿಬಂಧನೆಗೆ ಒಳಪಟ್ಟು ಶಾಲೆ ನಡೆಸುತ್ತಿರುವುದೇ; ಇಲ್ಲದಿದ್ದರೆ ಕೈಗೊಳ್ಳುವ ಕ್ರಮವೇನು?

ಶ್ರೀ ಆರ್ ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ. ಬೆಂಗಳೂರು ಉತ್ತರ ವಲಯ–3ರ ವ್ಯಾಪ್ತಿಯಲ್ಲಿರುವ ಕೃಷ್ಣಯ್ಯಪಾಳ್ಯದ ಇಂಡಿಯನ್ ಪಬ್ಲಿಕ್ ಶಾಲೆಯೂ ಅನಧಿಕೃತ ಶಾಲೆಯಾಗಿರುತ್ತದೆ.

ಆ.

- ಕ್ಷೇತ್ರ ಶಿಕ್ಷಣಾಧಿಕಾರಿ, ಉತ್ತರ ವಲಯ–3, ಇವರು ಈ ಅನಧಿಕೃತ ಶಾಲೆಯನ್ನು ಮುಚ್ಚಲು ದಿನಾಂಕ: 21.05.2005ರಂದು ಮತ್ತು 16.06.2005ರಲ್ಲಿ ನೋಟೀಸ್ ಜಾರಿ ಮಾಡಿರುತ್ತಾರೆ.
- ಇದಾದ ನಂತರ ಶಾಲೆಯನ್ನು ಮುಚ್ಚದೇ ಇರುವ ಕಾರಣ ಬೈಯಪ್ಪನಹಳ್ಳಿ ಆರಕ್ಷಕ ಠಾಣೆಯಲ್ಲಿ ದಿನಾಂಕ: 25.06.2005ರಂದು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುತ್ತಾರೆ ಮತ್ತು ಈ ಶಾಲೆಯನ್ನು ಮುಚ್ಚಲಾಗಿದೆ.

ಇ. ಈಗಾಗಲೇ ಸದರಿ ಶಾಲೆಯ ವಿರುದ್ಧ ಮೇಲಿನಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಈ.ಉ. ಕ್ರಿಮಿನಲ್ ಮೊಕದ್ದಮೆ ದಾಖಲಿಸಿದೆ ಮತ್ತು ಶಾಲೆಯನ್ನು ಮುಚ್ಚಿದೆ.

3727 (4723): ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :

ಡಾ ಹೆಚ್. ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಸುರತ್ಕಲ್ ಕ್ಷೇತ್ರ ವ್ಯಾಪ್ತಿಗೆ ಬರುವ ವಿವಿಧ ದರ್ಜೆಯ ಆರೋಗ್ಯ (ಸರಕಾರಿ) ಕೇಂದ್ರಗಳು ಎಷ್ಟು; ಅವುಗಳನ್ನು ವೈದ್ಯರು. ಇತರೆ ಸಿಬ್ಬಂದಿ. ವೈದ್ಯಕೀಯ ಉಪಕರಣಗಳು, ಮುಂತಾಗಿ ಅವಶ್ಯಕ ಮೂಲಭೂತ ಸೌಕರ್ಯಗಳಿಂದ ವ್ಯವಸ್ಥಿತಗೊಳಿಸಲಾಗಿದೆಯೇ;